ಚಾಮುಂಡೇಶ್ವರಿ ವಿದ್ಯುಚ್ಛಕ್ತಿಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಚೇರಿ
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ. ಬೆಟ್ಟದಮರ-571102
ದೂರವಾಣಿ : 08223-275464

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Office of the Asst. Executive Engineer(Ele)
O & M Sub Division, CESC
Bettadapura -571102
Website: www.cescmysore.org
E-mail: aeecescbpura@gmail.com
Company Identity Number[CIN] :- U40109KA2004SGC035177

ಕ್ರಮಾಂಕ: ಸ.ಕಾ.ನಿ.ಇಂ(ವಿ)/ಸಇಂ(ತಾ)/ಸೆಸ್ಕ್/ಬೆ.ಪು/2021-22/ 1386 ದಿನಾಂಕ: 10-01-2022

# ಸಭೆ ನಡಾವಳಿಗಳು

ದಿನಾಂಕ 29.12.2021 ರಂದು ಮಧ್ಯಾಹ್ನ 3 ಗಂಟೆಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ ಕೆ.ಆರ್. ನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಬೆಟ್ಟದಪುರ ಕಾರ್ಯ ಮತ್ತು ಪಾಲನ ಉಪವಿಭಾಗದ ವ್ಯಾಪ್ತಿಯ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದವರು,**

1. ಶ್ರೀ ಚಂದ್ರಶೇಖರ್ ಬಿ.ಎಸ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾ.ವಿ.ಸ.ನಿ.ನಿ, ಕೆ.ಆರ್. ನಗರ.
2. ಶ್ರೀ ಆಕಾಶ್ ಎಂ.ಪಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ.ನಿ. ಬೆಟ್ಟದಪುರ.
3. ಶ್ರೀ ರಾಜೇಶ್ ಪಿ, ಸಹಾಯಕ ಇಂಜಿನಿಯರ್(ತಾಂ), ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾ.ವಿ.ಸ.ನಿ.ನಿ ಬೆಟ್ಟದಪುರ.
4. ಶ್ರೀ ನವೀನ್ ವಿ.ಎನ್, ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ ವಿಭಾಗ ಚಾವಿಸನಿನಿ, ಬೆಟ್ಟದಪುರ.
5. ಶ್ರೀ ಮಣಿಕಂಠ ಕೆ.ಬಿ, ಪ್ರಭಾರ ಕಿರಿಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ, ಸೀಗೂರು.
6. ಶ್ರೀ ಮಧುಕುಮಾರ್, ಕಿರಿಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ, ಕಣಗಾಲು.
7. ಶ್ರೀ ಸೈಯದ್ ಮಹಮ್ಮದ್ ಗೌಸ್, ಕಿರಿಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ. ರಾವಂದೂರು
8. ಶ್ರೀ ಹರುವೇಗೌಡ ಹೆಚ್, ಕಿರಿಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ. ಕಿತ್ತೂರು.
9. ಶ್ರೀ ಮಹೇಶ್ ಎಸ್, ಪ್ರಭಾರಕಿರಿಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಶಾಖೆ. ಬೆಟ್ಟದಪುರ.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ಚಾ.ವಿ.ಸ.ನಿ.ನಿ, ಕೆ.ಆರ್. ನಗರ ರವರು ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಗೆ ಹಾಗೂ ಅಧಿಕಾರಿ/ನೌಕರರಿಗೆ ಸ್ವಾಗತಿಸಿದರು. ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಸಲಹೆ/ದೂರುಗಳನ್ನು ಆಲಿಸಿ ಈ ಕೆಳಕಂಡಂತೆ ಕ್ರಮವನ್ನು ಕೈಗೊಳ್ಳಲಾಯಿತು.

| ಕ್ರ.ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದಾಖಲಾದ ದೂರು/ಸಲಹೆಯ ವಿವರ | ಅನುಪಾಲನಾ ಕ್ರಮ |
|---|---|---|---|
| 1. | ಶ್ರೀ. ತೋಪೆಗೌಡ, ಕಗ್ಗಲಿಕೊಪ್ಪಲು ಗ್ರಾಮ | ಶ್ರೀ ತೋಪೆಗೌಡ, ಕಗ್ಗಲಿಕೊಪ್ಪಲು ಗ್ರಾಮ ಅವರ 25 ಕೆ.ವಿ.ಎ ಐ.ಪಿ ಪರಿವರ್ತಕವು ಪದೇ ಪದೇ ವಿಫಲಗೊಳ್ಳುತ್ತಿದ್ದು ಇದಕ್ಕೆ ಮತ್ತೊಂದು 25 ಕೆ.ವಿ.ಎ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೇಳಿಕೊಂಡರು | ಶಾಖಾಧಿಕಾರಿ ಕಿತ್ತೂರು ರವರಿಗೆ ಸ್ಥಳ ಪರಿಶೀಲಿಸಿ TTK ಯೋಜನೆಯಡಿ ಮತ್ತೊಂದು ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ತಯಾರಿಸಿ ಕೂಡಲೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಲಾಯಿತು. |
| 2. | ಶ್ರೀ ಶಿವಲಿಂಗೇಗೌಡ ಕೊಮಲಾಪುರ ಗ್ರಾಮ | ಶ್ರೀ ಶಿವಲಿಂಗೇಗೌಡ, ಕೊಮಲಾಪುರ ಗ್ರಾಮ ಅವರ ಮನೆ ಮುಂದೆ ಇರುವ ವಿದ್ಯುತ್ ಕಂಬವು ವಾಲಿರುತ್ತದೆ, ಅದನ್ನು ಸರಿಪಡಿಸುವಂತೆ ಸಭೆಯಲ್ಲಿ ಕೋರಿದರು. | ಶಾಖಾಧಿಕಾರಿ ಸೀಗೂರು ರವರಿಗೆ ಸ್ಥಳ ಪರಿಶೀಲಿಸಿ ಕೂಡಲೇ ಕ್ರಮವನ್ನು ತೆಗೆದುಕೊಳ್ಳಲು ಸೂಚಿಸಲಾಯಿತು. |



Scanned with CamScanner

| | | | |
|---|---|---|---|
| 3. | ಶ್ರೀ ಅಣ್ಣೇಗೌಡ ದೋರೆಕೆರೆ ಗ್ರಾಮ | ದೋರೆಕೆರೆ ಗ್ರಾಮದ ನಮ್ಮ ಮನೆಯ ಗೇಟಿನ ಮುಂಭಾಗದಲ್ಲಿ ಇರುವ' ವಿದ್ಯುತ್ ಕಂಬವನ್ನು ಸ್ಥಳಾಂತರ ಮಾಡಿಸಿಕೊಡುವಂತೆ ಸಭೆಯಲ್ಲಿ ಕೋರಿದರು. | ಸೀಗೂರು ರಾವಂದೂರು ರವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿಯಲ್ಲಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು. |
| 4. | ಶ್ರೀ ಹನುಮಯ್ಯ ದೋರೆಕೆರೆ ಗ್ರಾಮ | ದೋರೆಕೆರೆ ಗ್ರಾಮದಲ್ಲಿ ನಾನು ಒಂದು ಕೊಳವೆ ಬಾವಿಯನ್ನು ಕೊರೆಸಿದ್ದು ಆ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕವನ್ನು ನಿಡುವಂತೆ ಸಭೆಯಲ್ಲಿ ಕೋರಿದರು. | ಶಾಖಾಧಿಕಾರಿ ರಾವಂದೂರು ರವರಿಗೆ ಸದರಿ ಕೊಳವೆಬಾವಿಯನ್ನು ಸಕ್ರಮ ಮಾಡಿಸಿಕೊಂಡು ವಿದ್ಯುತ್ ಸಂಪರ್ಕವನ್ನು ನೀಡುವಂತೆ ಸಭೆಯಲ್ಲಿ ಸೂಚಿಸಿದರು. |
| 5. | ಶ್ರೀ ಚಿಕ್ಕೇಗೌಡ ಹರದೂರು ಗ್ರಾಮ | ಸದರಿಯವರ ಪರಿವರ್ತಕವು 25 ಕೆ.ವಿ.ಎ ಇದ್ದು ಅದರಲ್ಲಿ 7 ಸಂಖ್ಯೆಯ ಸಕ್ರಮ ಐ.ಪಿ ಸ್ಥಾವರಗಳು ಇದ್ದು, 63 ಕೆ.ವಿ.ಎ ಪರಿವರ್ತಕ ಅಳವಡಿಸಿಕೊಡಬೇಕೆಂದು ಕೋರಿರುತ್ತಾರೆ. | ಶಾಖಾಧಿಕಾರಿ ಬೆಟ್ಟದಪುರ ರವರಿಗೆ ಸ್ಥಳ ಪರಿಶೀಲಿಸಿ TTK ಯೋಜನೆಯಡಿಯಲ್ಲಿ ಅಂದಾಜು ಪಟ್ಟಿ ತಯಾರಿಸಿ ವಿಭಾಗ ಕಛೇರಿಗೆ ಸಲ್ಲಿಸಲು ಸಭೆಯಲ್ಲಿ ಸೂಚಿಸಿದರು |

ಸಭೆಯ ಕೊನೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಸಲಹೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಭಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಶಾಖಾಧಿಕಾರಿಗಳು ಸ್ಥಳ ಪರೀಶಿಲಿಸಿ ನಿಯಮಾನುಸಾರ ಕ್ರಮ ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ

10/1/22

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾ.ವಿ.ಸ.ನಿ.ನಿ., ಬೆಟ್ಟದಪುರ

ಪ್ರತಿಗಳು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನ ವೃತ್ತ ಚಾ.ವಿ.ಸ.ನಿ.ನಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ, ಕಾರ್ಯ ಮತ್ತು ಪಾಲನ ವಿಭಾಗ, ಕೆ.ಆರ್ ನಗರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನ ಶಾಖೆ ಚಾವಿಸನಿನಿ, ಬೆಟ್ಟದಪುರ/ ಕಿತ್ತೂರು/ ರಾವಂದೂರು/ ಕಣಗಾಲು/ ಸೀಗೂರು ರವರ ಮಾಹಿತಿಗಾಗಿ ಹಾಗೂ ಸಭೆಯಲ್ಲಿ ದಾಖಲಾದ ದೂರುಗಳನ್ನು ತ್ವರಿತವಾಗಿ ಸರಿಪಡಿಸಿ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಕಛೇರಿ ಪ್ರತಿ.



Scanned with CamScanner